# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ನಸದೊ/ಸಾ.ಆ.ವಿ/ವಿ.ಸ.1/2008-09 ದಿನಾಂಕ:29-07-2008

**-:: ವಿಶೇಷ ಸಭೆ ನಡವಳಿಕೆಗಳು ::-**

ದಿನಾಂಕ:29-07-2008ರಂದು ಮಂಗಳವಾರ ಬೆಳಿಗ್ಗೆ 11.00ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಜಿ.ರಾಮಕೃಷ್ಣ** ರವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷರು ಮತ್ತು ನಗರಸಭೆಯ ಎಲ್ಲಾ ಸದಸ್ಯರುಗಳು ಸೇರಿ ತೆಗೆದುಕೊಂಡ ನಿರ್ಣಯಗಳು:-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| ಸದಸ್ಯರುಗಳು | 28 | 03 | 31 |

ಮೊದಲಿಗೆ ನಗರಸಭೆಯ ಆಯುಕ್ತರಾದ ಶ್ರೀ ಎಸ್.ಜಿ.ರಾಜಶೇಖರ್‌ರವರು ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಗರಸಭೆಯ ಎಲ್ಲಾ ಸದಸ್ಯರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿದರು.

ನಂತರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ರಾಮಕೃಷ್ಣ ರವರು ಮಾತನಾಡಿ ಈ ಹಿಂದೆ ನಗರಸಭೆಯ ಮಾಜಿ ಅಧ್ಯಕ್ಷರಾದ **ಶ್ರೀ ಬಿ.ಜಿ.ಎಲ್.ಕಾಂತ್**ರವರು ದಿನಾಂಕ:13-04-2008ರಂದು ನಿಧನ ಹೊಂದಿರುವುದರಿಂದ ಸಭೆಯಲ್ಲಿ ಒಂದು ನಿಮಿಷದ ಕಾಲ ಮೌನಾಚರಣೆ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

**ವಿಷಯ ಸಂಖ್ಯೆ:1**

1ನೇ ವಾರ್ಡ್ ಬಸವೇಶ್ವರ ನಗರದಲ್ಲಿರುವ ಹೊಸಬಸ್ ನಿಲ್ದಾಣದ ಮುಖ್ಯ ರಸ್ತೆಯ ಚರಂಡಿಗೆ ಸಂಪರ್ಕ ಕಲ್ಪಿಸುವಂತೆ (ಶ್ರೀ ವೆಂಕಟೇಶ್ವರ ಪ್ರಸಾದ ಕಲ್ಯಾಣ ಮಂಟಪದ ಮುಂದಿನ ರಸ್ತೆ) ಎರಡೂ ಕಡೆ ಚರಂಡಿಯನ್ನು ನಿರ್ಮಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಜಾಗದ ಬಗ್ಗೆ ತಕರಾರು ಇರುವುದರಿಂದ ಪೂರಾ ದಾಖಲಾತಿಗಳನ್ನು ಪರಿಶೀಲನೆ ಮಾಡಿ ನಂತರ ಕ್ರಮ ಜರುಗಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:2**

ದಿನಾಂಕ:10-07-2008ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮುಂದೂಡಲಾಗಿದ್ದ ವಿಷಯ ಸಂಖ್ಯೆ.4ರಂತೆ ನಗರಸಭಾ ಅಧ್ಯಕ್ಷರಿಗೆ ಹೊಸದಾಗಿ ವಾಹನ ಖರೀದಿಸುವ ವಿಚಾರ.

**ತೀರ್ಮಾನ ಸಂಖ್ಯೆ:2**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಹಿಂದೆ ನಡೆದ ಸಾಮಾನ್ಯ ಸಭೆಯಲ್ಲಿ ವಿಷಯ ಸಂಖ್ಯೆ.4ರ ತೀರ್ಮಾನದಂತೆ ಮುಂದಿನ ಸಭೆಯಲ್ಲಿ ಮಂಡಿಸಲು ಸರ್ವಾನುಮತದಿಂದ ಒಪ್ಪಲಾಗಿದ್ದು, ಈ ಬಗ್ಗೆ ಚರ್ಚಿಸಲಾಗಿ ನಗರದಲ್ಲಿ ಹಾಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ಪರಿಶೀಲನೆ ಬಗ್ಗೆ ಹಾಗೂ ನೈರ್ಮಲ್ಯ ಸ್ವಚ್ಛತೆಯನ್ನು ನೋಡಿಕೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರವರಿಗೆ ಮತ್ತು ಪರಿಸರ ಅಭಿಯಂತರರಿಗೂ ವಾಹನದ ಅವಶ್ಯಕತೆ ಇರುವುದರಿಂದ ವಾಹನವನ್ನು ಒಂದು ವೇಳೆ ಗುತ್ತಿಗೆ ಆಧಾರದ ಮೇಲೆ ಪಡೆದಲ್ಲಿ ನಗರಸಭಾ ನಿಧಿಯಿಂದ ವಾಹನದ ಬಾಡಿಗೆ ಪ್ರತಿ ಮಾಹೆಗೆ ರೂ.46,000/-ಗಳು ನಗರಸಭೆಗೆ ನಷ್ಟ ಉಂಟಾಗುವುದರಿಂದ ಇದರ ಬದಲಿಗೆ ಹೊಸ ಕಾರನ್ನು ಅಧ್ಯಕ್ಷರಿಗೆ ಖರೀದಿಸಿ ಹಾಲಿ ಇರುವ ಕಾರನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಹಾಗೂ ಪರಿಸರ ಅಭಿಯಂತರರವರಿಗೆ ನೀಡುವಂತೆ ಸಭೆಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:3</u>**

ನೀರು ಸರಬರಾಜು ವಿಭಾಗದ 2008–09ನೇ ಸಾಲಿಗೆ ಕರೆದಿರುವ ವಾರ್ಷಿಕ ಟೆಂಡರ್‌ನ ಕಾಮಗಾರಿಗಳಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ದರಗಳನ್ನು ಅಂಗೀಕರಿಸುವ ವಿಚಾರ.

**<u>ತೀರ್ಮಾನ ಸಂಖ್ಯೆ:3</u>**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನೀರು ಸರಬರಾಜು ವಿಭಾಗಕ್ಕೆ 2008–09ನೇ ಸಾಲಿಗೆ ಕರೆದಿರುವ ವಾರ್ಷಿಕ ಟೆಂಡರ್‌ನಂತೆ ನೀರು ಸರಬರಾಜು ಸಾಮಗ್ರಿಗಳನ್ನು ಪೂರೈಸಲು 6ಜನ ಟೆಂಡರ್ ದಾರರಾದ (1) ಎಸ್.ಎಂ.ಡಿ. ಇಂಜಿನಿಯರ್ಸ್, ಬೆಂಗಳೂರು. (2) ಬನಶಂಕರಿ ಸೇಲ್ಸ್ ಕಾರ್ಪೋರೇಷನ್ಸ್, ಬೆಂಗಳೂರು (3) ಮೈತ್ರಿಶ್ರೀ ಎಂಟರ್ ಪ್ರೈಸಸ್, ದೊಡ್ಡಬಳ್ಳಾಪುರ (4) ವಿಶಾಲ್ ಕರ್ನಾಟಕ ಟ್ರೇಡ್ ಲಿಂಕ್ಸ್ ಪ್ರೈ.ಲಿ, ಬೆಂಗಳೂರು (5) ವಿಜಯಶ್ರೀ ಎಂಟರ್ ಪ್ರೈಸಸ್, ದೊಡ್ಡಬಳ್ಳಾಪುರ ಮತ್ತು (6) ಸಾಯಿ ವಿಷ್ಣು ಎಂಟರ್ ಪ್ರೈಸಸ್, ಬೆಂಗಳೂರು ರವರು ನಮೂದಿಸಿರುವ ಐಟಂವಾರು ದರಗಳನ್ನು ಪರಿಶೀಲಿಸಲಾಗಿ ಅದರಂತೆ ಐಟಂವಾರು ಕಡಿಮೆ ದರ ನಮೂದಿಸಿರುವುದನ್ನು ಅನುಮೋದಿಸಿ, ಮೇಲ್ಕಂಡ ಆರು ಜನ ಗುತ್ತಿಗೆದಾರರಿಗೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಸರಬರಾಜು ಅದೇಶ ನೀಡಲು ಸಹ ತೀರ್ಮಾನಿಸಲಾಯಿತು.

ಹಾಗೂ ನೀರು ಸರಬರಾಜು ವಿಭಾಗದ ಪೈಪ್‌ಲೈನ್ ಮಣ್ಣು ಅಗೆತ, ದುರಸ್ಥಿ ಮತ್ತು ಇತ್ಯಾದಿ ಕಾಮಗಾರಿ ಕೆಲಸಕ್ಕಾಗಿ ಟೆಂಡರ್ ಕರೆದಿದ್ದು, ವಾರ್ಡ್ ನಂ.1 ರಿಂದ 15ರವರೆಗೆ ಶ್ರೀ ಎ.ಆರ್. ಲಕ್ಷ್ಮೀನಾರಾಯಣ ರವರು ನಮೂದಿಸಿರುವ ಎಸ್.ಆರ್ ದರಕ್ಕೆ ಶೇ.25ರಷ್ಟು ಕಡಿಮೆ ದರವು ಉಳಿದ ಗುತ್ತಿಗೆದಾರರ ದರಗಳಿಗಿಂತ ಕಡಿಮೆ ಇರುವುದರಿಂದ ಮತ್ತು ವಾರ್ಡ್ ನಂ.16 ರಿಂದ 31ರವರೆಗೆ ಶ್ರೀ ಆರ್. ತ್ಯಾಗರಾಜು ರವರು ನಮೂದಿಸಿರುವ ಎಸ್.ಆರ್ ದರಕ್ಕೆ ಶೇ.25ರಷ್ಟು ಕಡಿಮೆ ದರವು ಉಳಿದ ಗುತ್ತಿಗೆದಾರರ ದರಗಳಿಗಿಂತ ಕಡಿಮೆ ಇರುವುದರಿಂದ ಇವರ ದರಗಳನ್ನು ಅಂಗೀಕರಿಸಿ ಈ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಲು ತೀರ್ಮಾನಿಸಲಾಯಿತು.

ನೀರು ಸರಬರಾಜು ವಿಭಾಗದಕೊಳವೆ ಬಾವಿಗಳ ವಿವಿಧ ಪವರ್ ಪಂಪ್ಸ್, ಕಂಟ್ರೋಲ್ ಪ್ಯಾನಲ್ ಇತ್ಯಾದಿ ರಿಪೇರಿ ಕೆಲಸಗಳಿಗಾಗಿ ಇಬ್ಬರು ಗುತ್ತಿಗೆದಾರರಾದ ಮೇ:: ಮೈತ್ರಿಶ್ರೀ ಎಂಟರ್ ಪ್ರೈಸಸ್, ದೊಡ್ಡಬಳ್ಳಾಪುರ, ಚಿನ್ನಿ ದರ್ಶನ್ ಎಲೆಕ್ಟ್ರಿಕಲ್ಸ್ ರೀವೈಂಡಿಂಗ್ ಮತ್ತು ಇಂಜಿನಿಯರಿಂಗ್ಸ್, ದೊಡ್ಡಬಳ್ಳಾಪುರ ಇವರು ತಮ್ಮ ದರಗಳನ್ನು ನಮೂದಿಸಿದ್ದು, ಇವರಲ್ಲಿ ಚಿನ್ನಿ ದರ್ಶನ್ ಎಲೆಕ್ಟ್ರಿಕಲ್ಸ್ ರೀವೈಂಡಿಂಗ್ ಮತ್ತು ಇಂಜಿನಿಯರಿಂಗ್ಸ್, ದೊಡ್ಡಬಳ್ಳಾಪುರ ರವರು ನಮೂದಿಸಿರುವ ದರವು ಕಡಿಮೆ ಇರುವುದರಿಂದ ಇವರ ದರಗಳನ್ನು ಅಂಗೀಕರಿಸಿ ಈ ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

ನೀರು ಸರಬರಾಜು ಸಾಮಗ್ರಿಗಳ ವಿಭಾಗಕ್ಕೆ ದೈನಂದಿನ ರಿಪೇರಿ ಹಾಗೂ ಇತ್ಯಾದಿ ಕೆಲಸಗಳಿಗೆ ಬೇಕಾಗಿರುವ ಅಗತ್ಯ ಸಾಮಗ್ರಿಗಳನ್ನು ಮೇಲಿನಂತೆ ಅಂಗೀಕರಿಸಿರುವ ದರಗಳಿಗೆ ಸರಬರಾಜು ಮಾಡಿಕೊಳ್ಳಲು ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ:4</u>**

ನಗರಸಭಾ ವ್ಯಾಪ್ತಿಯಲ್ಲಿನ ವಿವಿಧ ವಾರ್ಡ್‌ಗಳ ಅವಶ್ಯವಿರುವ ಸ್ಥಳಗಳಲ್ಲಿ ನೀರು ಸರಬರಾಜು ಪೈಪ್‌ಲೈನ್‌ಗಳನ್ನು ಅಳವಡಿಸುವ ವಿಚಾರ.

-3-

**ತೀರ್ಮಾನ ಸಂಖ್ಯೆ:4**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರದ 31ವಾರ್ಡ್‌ಗಳಲ್ಲಿ ಅತ್ಯಾವಶ್ಯಕವಿರುವ ಸ್ಥಳಗಳಲ್ಲಿ ಸದಸ್ಯರು ಮತ್ತು ಸಾರ್ವಜನಿಕರು ನೀಡಿರುವ ಮನವಿಗಳಂತೆ ಪೈಪ್ ಲೈನ್ ಅಳವಡಿಸಲು ತಯಾರಿಸಿರುವ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಕಾಮಗಾರಿಗಳನ್ನು ಅತೀ ಜರೂರಾಗಿ ಪೂರ್ಣಗೊಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಕಾಮಗಾರಿಗಳ ವಿವರ ಈ ಕೆಳಕಂಡಂತಿರುತ್ತದೆ.

1) ವಾರ್ಡ್ ನಂ.1ರ ಬಸವೇಶ್ವರನಗರದ ಮುಖ್ಯ ರಸ್ತೆಯಲ್ಲಿ ಉಳಿದಿರುವ ಪೈಪ್‌ಲೈನ್ ಹಾಕುವ ಕೆಲಸ
2) ವಾರ್ಡ್ ನಂ.2ರ ಗಂಗಾಧರಪುರದ ನಗರಸಭಾ ನಿವೇಶನಗಳ ನಾಲ್ಕು ಅಡ್ಡರಸ್ತೆಗಳಿಗೆ ಪೈಪ್ ಲೈನ್ ಹಾಕುವ ಕೆಲಸ.
3) ವಾರ್ಡ್ ನಂ.3ರ ಡಿ. ಕ್ರಾಸ್ ಪೆಟ್ರೋಲ್ ಬ್ಯಾಂಕ್ ಹಿಂಭಾಗದ 7ನೇ ಅಡ್ಡ ರಸ್ತೆಯಲ್ಲಿ ಪೈಪ್ ಲೈನ್ ಹಾಕುವ ಕೆಲಸ.
4) ವಾರ್ಡ್ ನಂ.3ರ ಶ್ರೀ ಕೆ.ವಿ.ಕೃಷ್ಣಕುಮಾರ್ ರವರ ಮನೆಯಿಂದ ಪೇಪರ್ ಹನುಮಂತಯ್ಯನವರ ಮನೆವರೆಗೆ ಪೈಪ್ ಲೈನ್ ಹಾಕುವ ಕೆಲಸ.
5) ವಾರ್ಡ್ ನಂ.4ರ ಪ್ರವಾಸಿ ಮಂದಿರ ಶ್ರೀ ಟಿ.ಬಿ. ನಾರಾಯಣಪ್ಪ ಬಡಾವಣೆಯ 1 ಮತ್ತು 3ನೇ ಅಡ್ಡ ರಸ್ತೆಗಳಿಗೆ 3 ಇಂಚು ಪೈಪ್‌ಲೈನ್ ಹಾಕುವ ಕೆಲಸ.
6) ವಾರ್ಡ್ ನಂ.4 ವಿನಾಯಕನಗರದ ಐದು ರಸ್ತೆಗಳಿಗೆ ಪೈಪ್ ಲೈನ್ ಹಾಕುವ ಕೆಲಸ,
7) ವಾರ್ಡ್ ನಂ.5ರ ಅರ್ಕಾವತಿ ಮತ್ತು ಆಶ್ರಯ ಬಡಾವಣೆಗಳಲ್ಲಿ ಎರಡು ಕಿರುನೀರು ಸರಬರಾಜು ಟ್ಯಾಂಕ್‌ಗಳನ್ನು ನಿರ್ಮಿಸುವ ಕೆಲಸ,
8) ವಾರ್ಡ್ ನಂ.5ರ ಅರ್ಕಾವತಿ ಬಡಾವಣೆ ಶ್ಯಾಮಣ್ಣ ಮನೆ ರಸ್ತೆಗೆ ಆಶ್ರಯ ಬಡಾವಣೆ ಮಾಣಿರವರ ಮನೆ ರಸ್ತೆಗೆ ಹಾಗೂ ಶಿವು ಮನೆ ರಸ್ತೆಗೆ ಪೈಪ್‌ಲೈನ್ ಹಾಕುವ ಬಗ್ಗೆ,
9) ವಾರ್ಡ್ ನಂ.6ರ ಮುತ್ತೂರಿನ ಮುಖ್ಯ ರಸ್ತೆಗೆ ಪೈಪ್ ಲೈನ್ ಅಳವಡಿಸುವ ಕೆಲಸ.
10) ವಾರ್ಡ್ ನಂ.9ರ ಚೈತನ್ಯ ನಗರ ಮತ್ತು ವಿಧ್ಯಾನಗರದ 8 ಅಡ್ಡ ರಸ್ತೆಗಳಿಗೆ 3 ಇಂಚು ಪೈಪ್ ಲೈನ್ ಹಾಕುವ ಕೆಲಸ,
11) ವಾರ್ಡ್ ನಂ.10ರ ಕನಕದಾಸ ರಸ್ತೆ ದಾನಪ್ಪ ಕ್ವಾರ್ಟಸ್ ರಸ್ತೆಗೆ ಪೈಪ್ ಲೈನ್ ಹಾಕುವ ಕೆಲಸ,
12) ವಾರ್ಡ್ ನಂ.10ರ ಕಡಬೂರು ಗಂಗಾಧರಪ್ಪ ಮನೆ ರಸ್ತೆಗೆ ಕಾಂಕ್ರೀಟ್ ಹಾಕುತ್ತಿದ್ದು, ಸದರಿ ರಸ್ತೆಗೆ ಪೈಪ್‌ಲೈನ್ ಹಾಕುವ ಬಗ್ಗೆ.
13) ವಾರ್ಡ್ ನಂ.10ರ ಚೈತನ್ಯನಗರ ಲಕ್ಷ್ಮೀದೇವಸ್ಥಾನ ಹತ್ತಿರದ ಹನುಮಂತ ರವರ ಮನೆ ಎದುರು ರಸ್ತೆಗೆ 3 ಇಂಚು ಪೈಪ್‌ಲೈನ್ ಹಾಕುವ ಕೆಲಸ.
14) ವಾರ್ಡ್ ನಂ.11ರ ಕರೇನಹಳ್ಳಿ ಕಾಲೇಜು ಹಿಂಭಾಗದ ರಸ್ತೆಗಳಿಗೆ ಪೈಪ್‌ಲೈನ್ ಹಾಕುವ ಕೆಲಸ.
15) ವಾರ್ಡ್ ನಂ.11ರ ಶ್ರೀ ಕೊಂಗಾಡಿಯಪ್ಪ ಕಾಲೇಜು ರಸ್ತೆಯಿಂದ ಮಂಗಳಾ ಹೈಸ್ಕೂಲ್ ಹಿಂಭಾಗದವರೆಗೂ ಪೈಪ್ ಲೈನ್ ಅಳವಡಿಸುವ ಕೆಲಸ.
16) ವಾರ್ಡ್ ನಂ.12ರ ತೆಲಗು ಸ್ಕೂಲ್ ಹಿಂಭಾಗ ಆರ್. ನಾರಾಯಣಪ್ಪ ಮನೆ ರಸ್ತೆಗೆ ಪೈಪ್‌ಲೈನ್ ಹಾಕುವ ಕೆಲಸ.
17) ವಾರ್ಡ್ ನಂ.12ರ ಕನಕದಾಸನಗರ ಆಚಾರ್ ಮನೆ ಮುಂದೆ ರಸ್ತೆಗೆ ಪೈಪ್‌ಲೈನ್ ಹಾಕುವ ಕೆಲಸ.
18) ವಾರ್ಡ್ ನಂ.13ರ ಭುವನೇಶ್ವರಿ ನಗರ 7ನೇ ಕ್ರಾಸ್‌ಗೆ ಪೈಪ್ ಲೈನ್ ಹಾಕುವ ಬಗ್ಗೆ.

19) ವಾರ್ಡ್ ನಂ.13ರ ಭುವನೇಶ್ವರಿ ನಗರದ ಅಂಗನವಾಡಿ ಕೇಂದ್ರ ಹಾಗೂ ಸವಿತಾ ಸಮಾಜದ ಸಂಗೀತ ಶಾಲೆಗೆ ನೀರಿನ ಸೌಲಭ್ಯ ಕಲ್ಪಿಸುವ ಬಗ್ಗೆ.
20) ವಾರ್ಡ್ ನಂ.13ರ ಭುವನೇಶ್ವರಿನಗರ, ಚಕ್ರದಿಮ್ಮನಕೋಟೆ ಶ್ರೀಧರಪ್ಪನವರ ಮನೆ ರಸ್ತೆ ನಿಂತಿರುವ ಪೈಪ್‌ಲೈನ್ ಮುಂದುವರೆಸುವ ಕೆಲಸ.
21) ವಾರ್ಡ್ ನಂ.14ರ ಚೌಡೇಶ್ವರಿ ರಸ್ತೆಯ ಎ.ಜೆ.ಮೇಡಂ ಮನೆಯಿಂದ ರಾಗಿಮಿಷಿನ್‌ವರೆಗೆ ಪೈಪ್‌ಲೈನ್ ಹಾಕುವ ಕೆಲಸ,
22) ವೀರಭದ್ರನಪಾಳ್ಯದ ಎಡಭಾಗ ಮಲ್ಲೇಶ ರವರ ಮನೆ ಪಕ್ಕದಿಂದ ಚೌಡಪ್ಪರವರ ಮನೆವರೆಗೆ ಪೈಪ್ ಲೈನ್ ಹಾಕುವ ಕೆಲಸ.
23) ವಾರ್ಡ್ ನಂ.14ರ ಮೋಹಿತೆ ರವರ ಮನೆಯಿಂದ ಶ್ರೀ ಜಿ. ಸತ್ಯಾನರಾಯಣರವರ ಮನೆವರೆಗೆ ಪೈಪ್‌ಲೈನ್ ಹಾಕುವ ಕೆಲಸ.
24) ವಾರ್ಡ್ ನಂ.18ರ ಕಲ್ಲುಪೇಟೆ ಲಕ್ಷ್ಮೀದೇವಮ್ಮ ಮನೆ ರಸ್ತೆಗೆ ಕಾಂಕ್ರೀಟ್ ಹಾಕುತ್ತಿದ್ದು, ರಸ್ತೆಗೆ ಪೈಪ್ ಲೈನ್ ಹಾಕುವ ಬಗ್ಗೆ.
25) ವಾರ್ಡ್ ನಂ.19ರ ಶ್ರೀ ಕೆ.ವೈ.ಕುಮಾರ್ ಮನೆಯಿಂದ ಗುಟ್ಟೆ ಶಾರದಮ್ಮ ಮನೆವರೆಗೆ ಪೈಪ್ ಲೈನ್ ಹಾಕುವ ಕೆಲಸ.
26) ವಾರ್ಡ್ ನಂ.20ರ ಜಾನಿಸಾಬ್ ಮನೆಯಿಂದ ಟೆಲಿಪೋನ್ ಎಕ್ಸ್‌ಚೇಂಜ್ ವರೆಗೆ ಪೈಪ್‌ಲೈನ್ ಹಾಕುವ ಕೆಲಸ.
27) ವಾರ್ಡ್ ನಂ.20ರ ಗೆದರೆ ಶಂಕರಪ್ಪನವರ ಮನೆ ರಸ್ತೆಗೆ ಪೈಪ್ ಲೈನ್ ಕೆಲಸ
28) ವಾರ್ಡ್ ನಂ.21ರ ದರ್ಗಾಮೊಹಲ್ಲಾ ಟ್ಯಾಂಕ್ ರಿಪೇರಿ ಹಾಗೂ ರಸ್ತೆಗೆ ಪೈಪ್‌ಲೈನ್ ಹಾಕಿ ಲಿಂಕ್ ಮಾಡುವ ಬಗ್ಗೆ.
29) ವಾರ್ಡ್ ನಂ.21ರ ಗಣೇಶ ದೇವಸ್ಥಾನದ ನೀರಿನ ಟ್ಯಾಂಕ್ ರಸ್ತೆಗೆ ಪೈಪ್‌ಲೈನ್ ಅಳವಡಿಸುವ ಕೆಲಸ.
30) ವಾರ್ಡ್ ನಂ.22ರ ಹೇಮಾವತಿಪೇಟೆ ಮಾರ್ಕೆಟ್ ಟ್ಯಾಂಕ್ ಹತ್ತಿರ ಪೈಪ್ ಲೈನ್ ಹಾಕುವ ಕೆಲಸ
31) ವಾರ್ಡ್ ನಂ.24ರ ಕಬ್ಬಡಿ ಪ್ರಸನ್ನ ಮನೆಯಿಂದ ಜೆ.ಎಸ್ ಬಸವರಾಜು ಮನೆವರೆಗೆ ಪೈಪ್ ಲೈನ್ ಹಾಕುವ ಕೆಲಸ.
32) ವಾರ್ಡ್ ನಂ.25ರ ಎಂ.ಎ.ಬಿ.ಎಲ್. ಶಾಲೆ ಮುಂಭಾಗದ ಮಿನಿ ಟ್ಯಾಂಕ್ ತೆರವುಗೊಳಿಸುವ ಬಗ್ಗೆ.
33) ವಾರ್ಡ್ ನಂ.25ರ ಉಮರ್ ಅಂಗಡಿ ರಸ್ತೆಗೆ ಪೈಪ್‌ಲೈನ್ ಹಾಕುವ ಬಗ್ಗೆ.
34) ವಾರ್ಡ್ ನಂ.25 ಪ್ರಸನ್ನ ಅಂಗಡಿ ಮುಂಭಾಗದ ರಸ್ತೆಗೆ ಪೈಪ್‌ಲೈನ್ ಹಾಕುವ ಬಗ್ಗೆ.
35) ವಾರ್ಡ್ ನಂ 25 ಮಸೀದಿ ಮುಂದೆ ರಸ್ತೆಯಿಂದ ಎಲೆಪೇಟೆ ಸರ್ಕಲ್ ವರೆವಿಗೂ ಪೈಪ್ ಲೈನ್ ಹಾಕುವ ಕೆಲಸ.
36) ವಾರ್ಡ್ ನಂ.28ರಲ್ಲಿ ನಗರಸಭಾ ಕೊಳವೆ ಬಾವಿಗಳಿಂದ ಸೋಮೇಶ್ವರ ಬಡಾವಣೆಯ ಮುಖ್ಯ ರಸ್ತೆಯ ವರೆಗೆ 4 ಇಂಚು ಪೈಪ್‌ಲೈನ್ ಅಳವಡಿಸುವ ಕೆಲಸ.
37) ವಾರ್ಡ್ ನಂ.30ರ ಇಸ್ಲಾಂಪುರ 6ನೇ ಅಡ್ಡ ರಸ್ತೆಯಲ್ಲಿ ಪೈಪ್‌ಲೈನ್ ಹಾಕುವ ಬಗ್ಗೆ.
38) ವಾರ್ಡ್ ನಂ.30ರ ಇಸ್ಲಾಂಪುರ 7ನೇ ಕ್ರಾಸ್‌ನಲ್ಲಿ ಪೈಪ್‌ಲೈನ್ ಹಾಕುವ ಕೆಲಸ.
39) ವಾರ್ಡ್ ನಂ.30ರ ಇಸ್ಲಾಂಪುರ ಅಮ್ಮುರವರ ಮನೆಪಕ್ಕದ ರಸ್ತೆಗೆ ಪೈಪ್‌ಲೈನ್ ಕೆಲಸ,
40) ವಾರ್ಡ್ ನಂ.25ರ ದರ್ಜಿಪೇಟೆ ಅಡ್ಡರಸ್ತೆವರೆಗೆ ಪೈಪ್ ಲೈನ್ ಹಾಕುವ ಕೆಲಸ,
41) ವಾರ್ಡ್ ನಂ.6ರ ಕೆಂಪೇಗೌಡನಗರದಲ್ಲಿ ಜಕ್ಕಲಮಡುಗು ಯೋಜನೆಯಡಿ ನಿರ್ಮಿಸಿರುವ ಓವರ್ ಹೆಡ್ ಟ್ಯಾಂಕ್‌ಗೆ ಪೈಪ್‌ಲೈನ್ ಹಾಕಿ ಲಿಂಕ್ ಮಾಡುವ ಕೆಲಸ.
42) ವಾರ್ಡ್ ನಂ.5ರ ಗೋಪಾಲ್ ಟಾಕೀಸ್ ಎದುರು ಆಂಜಿನಪ್ಪರವರ ಫ್ಯಾಕ್ಟರಿ ರಸ್ತೆಗೆ ಪೈಪ್‌ಲೈನ್ ಹಾಕುವ ಕೆಲಸ,
43) ವಾರ್ಡ್ ನಂ.7ರ ರೈಲ್ವೆ ಸ್ಟೇಷನ್ ಕೃಷ್ಣಮೂರ್ತಿ ಹೋಟೆಲ್ ಪಕ್ಕದ ರಸ್ತೆಗೆ ಪೈಪ್‌ಲೈನ್ ಹಾಕುವ ವಿಚಾರ.

**ಸಾರ್ವಜನಿಕರ ಅರ್ಜಿಗಳು :**

1) ವಾರ್ಡ್ ನಂ.9ರ ವಿದ್ಯಾನಗರ ಬಿಲ್ಲೆ ವೆಂಕಟರಾಮ್ ಮನೆ ಹತ್ತಿರ ರಸ್ತೆಗಳಿಗೆ ಪೈಪ್‌ಲೈನ್ ಹಾಕುವ ಬಗ್ಗೆ.

2) ವಾರ್ಡ್ ನಂ.20ರ ಸಿನಿಮಾ ರಾಮಯ್ಯನವರ ಮನೆ ರಸ್ತೆಗೆ ಪೈಪ್‌ಲೈನ್ ಹಾಕುವ ಬಗ್ಗೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ವಿಷಯಗಳಲ್ಲಿ:**

**ವಿಷಯ ಸಂಖ್ಯೆ:–5/1**

2008–09ನೇ ಸಾಲಿಗೆ ಆಯ–ವ್ಯಯದಲ್ಲಿ ಕಾಯ್ದಿರಿಸಿರುವ ಮೊತ್ತಕ್ಕೆ ಶೇ.18ರ ಕ್ರಿಯಾ ಯೋಜನೆಯನ್ನು ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಅನುಮೋದನೆ ಪಡೆಯುವ ವಿಚಾರ.

**ತೀರ್ಮಾನ ಸಂಖ್ಯೆ: 5/1**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಶೇ.18ರ ಯೋಜನೆಯಡಿಯಲ್ಲಿ ಕಾಯ್ದಿರಿಸಿರುವ ಬಾಬ್ತು ರೂ.30.00ಲಕ್ಷಕ್ಕೆ ಸರ್ಕಾರದ ಮಾರ್ಗ ಸೂಚಿನ್ವಯ ಕ್ರಿಯಾ ಯೋಜನೆಯನ್ನು ಅತೀ ಜರೂರಾಗಿ ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:–5/2**

ಕಛೇರಿಗೆ ಅಗತ್ಯವಿರುವ ಪೀಠೋಪಕರಣ ಖರೀದಿ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ: 5/2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ನಗರಸಭೆಗೆ ನೂತನವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಆಯ್ಕೆಯಾಗಿದ್ದು, ಪೌರಾಯುಕ್ತರವರ ಕೊಠಡಿಯನ್ನು ಅಧ್ಯಕ್ಷರಿಗೆ ನೀಡಿರುವುದರಿಂದ ಕಛೇರಿಯಲ್ಲಿ ಪೌರಾಯುಕ್ತರಿಗೆ ನೂತನ ಕೊಠಡಿಯನ್ನು ನಿರ್ಮಿಸಿ, ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸಲು ಸಭೆಯಲ್ಲಿ ಅನುಮೋದಿಸಿ, ಮಾನ್ಯ ಜಿಲ್ಲಾಧಿಕಾರಿಗಳವರ ಮಂಜೂರಾತಿ ಪಡೆಯಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ:–5/3**

ಕಛೇರಿಯಲ್ಲಿರುವ ಶೌಚಾಲಯ ಕೊಠಡಿಯನ್ನು ದುರಸ್ಥಿ ಪಡಿಸಿ, ದಾಖಲೆಗಳ ದಾಸ್ತಾನು ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ: 5/3**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಕಛೇರಿಯಲ್ಲಿರುವ ಶೌಚಾಲಯವನ್ನು ದುರಸ್ಥಿಪಡಿಸಿ ಕಛೇರಿಯ ದಾಖಲೆಗಳ ದಾಸ್ತಾನು ನಿರ್ವಹಣೆಗೆ ಬೇಕಾಗುವ ವ್ಯವಸ್ಥೆಯನ್ನು ಕಲ್ಪಿಸುವಂತೆ ತಾಂತ್ರಿಕ ಶಾಖೆಗೆ ಸೂಚಿಸಿ, ಸದರಿ ಕೊಠಡಿಗೆ ಬೇಕಾಗುವ ಸಾಮಗ್ರಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆಯುವಂತೆ ಸಭೆಯಲ್ಲಿ ತೀರ್ಮಾನಿಸಿಲಾಯಿತು.

---

**ಸಹಿ:–**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**“ನಕಲು ಪ್ರತಿ “**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**